REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 | ಸಂಚಿಕೆ : 42 | 21 ಜನವರಿ 2026 | ಬುಧವಾರ | ಪುಟಗಳು : 8 | ಬೆಲೆ : 2/-




# ನೂತನ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಪರವಾನಗಿ : ಸಲಹೆ ಆಹ್ವಾನಿಸಿದ ಭಾರತೀಯ ರಿಸರ್ವ್ ಬ್ಯಾಂಕ್

**ಮುಂಬೈ :** ಪಟ್ಟಣ ಸಹಕಾರ ಬ್ಯಾಂಕುಗಳನ್ನು ಆರಂಭಿಸಲು 2004ರ ನಂತರ ಯಾವುದೇ ಪರವಾನಗಿ ನೀಡಿಲ್ಲ. ಹೊಸದಾಗಿ ಪರವಾನಗಿ ಪಡೆದಿದ್ದ ಹಲವು ಬ್ಯಾಂಕುಗಳು ಬಹಳ ಕಡಿಮೆ ಅವಧಿಯಲ್ಲಿ ಹಣಕಾಸಿನ ಸಂಕಷ್ಟಕ್ಕೆ ಸಿಲುಕಿದ ಕಾರಣಕ್ಕೆ ಆರ್‌ಬಿಐ ಹೊಸದಾಗಿ ಪರವಾನಗಿ ನೀಡದಿರಲು ತೀರ್ಮಾನಿಸಿತ್ತು.




ಕಳೆದ ಎರಡು ದಶಕಗಳಲ್ಲಿ ಈ ವಲಯದಲ್ಲಿ ಕಂಡುಬಂದಿರುವ ಧನಾತ್ಮಕ ಬೆಳವಣಿಗೆಗಳನ್ನು ಪರಿಗಣಿಸಿ, ಸಂಬಂಧಪಟ್ಟವರಿಂದ ಬಂದಿರುವ ಬೇಡಿಕೆಯನ್ನು ಗಮನಿಸಿ, ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಹೊಸದಾಗಿ ಪರವಾನಗಿ ನೀಡುವ ಬಗ್ಗೆ ಸಾರ್ವಜನಿಕ ಸಮಾಲೋಚನಾ ಪತ್ರವನ್ನು ಪ್ರಕಟಿಸಲಾಗುತ್ತದೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಹೇಳಿದ್ದಾರೆ.

ಈ ವಿಚಾರವಾಗಿ ಮುಂದಡಿ ಇರಿಸಿರುವ ಆರ್‌ಬಿಐ, ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಪರವಾನಗಿ ನೀಡುವ ವಿಷಯವಾಗಿ ಸಮಾಲೋಚನಾ ಪತ್ರವನ್ನು ಬಿಡುಗಡೆ ಮಾಡಿದೆ. ಇದಕ್ಕೆ ಸಾರ್ವಜನಿಕರು ಫೆಬ್ರುವರಿ 13ಕ್ಕೆ ಮುಂಚಿತವಾಗಿ ಸಲಹೆಗಳನ್ನು ನೀಡಬೇಕಿದೆ.

ಆರ್‌ಬಿಐ ರಚಿಸಿದ ಹಲವು ಉನ್ನತ ಮಟ್ಟದ ಸಮಿತಿಗಳು, ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮತ್ತೆ ಪರವಾನಗಿ ನೀಡುವ ವಿಚಾರದ ಬಗ್ಗೆ ಪರಿಶೀಲನೆ ನಡೆಸಿ ಕೆಲ ಶಿಫಾರಸುಗಳನ್ನು ನೀಡಿವೆ ಎಂದು ಸಮಾಲೋಚನಾ ಪತ್ರದಲ್ಲಿ ಹೇಳಲಾಗಿದೆ.

ಹೊಸದಾಗಿ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಪ್ರಾರಂಭಿಸಲು ಪರವಾನಗಿ ನೀಡಲು ಇದು ಸರಿಯಾದ ಸಮಯವೇ, ಪರವಾನಗಿ ನೀಡುವುದಾದರೆ ಅರ್ಹತಾ ಮಾನದಂಡಗಳು ಏನಿರಬೇಕು ಎಂಬ ಬಗ್ಗೆ ಆರ್‌ಬಿಐ ಸಲಹೆಗಳನ್ನು ಆಹ್ವಾನಿಸಿದೆ.

ವಿಫಲಗೊಂಡ ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಹೆಚ್ಚಿನವು ಸಣ್ಣ ಗಾತ್ರದವು ಆಗಿದ್ದವು. ಹೀಗಾಗಿ, ಈಗ ಪರವಾನಗಿ ನೀಡುವುದಾದಲ್ಲಿ ದೊಡ್ಡ ಗಾತ್ರದ ಪತ್ತಿನ ಸಹಕಾರ ಸಂಘಗಳಿಗೆ ಮಾತ್ರ ಅಂತಹ ಪರವಾನಗಿ ನೀಡುವುದು ಸೂಕ್ತ ಕ್ರಮವಾಗಬಹುದು ಎಂಬ ಅಂಶವನ್ನೂ ಸಮಾಲೋಚನಾ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಪತ್ತಿನ ಸಹಕಾರ ಸಂಘವೊಂದು ಪಟ್ಟಣ ಸಹಕಾರ ಬ್ಯಾಂಕನ್ನಾಗಿ ಪರಿವರ್ತನೆ ಮಾಡಲು ಪರವಾನಗಿಗೆ ಅರ್ಜಿ ಸಲ್ಲಿಸಬೇಕು ಎಂದಾದರೆ ಅದು ಕನಿಷ್ಠ ರೂ.300 ಕೋಟಿ ಬಂಡವಾಳ ಹೊಂದಿರಬೇಕು ಎಂದು ಉಲ್ಲೇಖ ಮಾಡಲಾಗಿದೆ.

ಸಂಘವು ಕಳೆದ 10 ವರ್ಷಗಳಿಂದ ಸಕ್ರಿಯವಾಗಿ ಕಾರ್ಯಾಚರಣೆ ನಡೆಸುತ್ತಿರಬೇಕು, ಐದು ವರ್ಷಗಳಿಂದ ಒಳ್ಳೆಯ ಹಣಕಾಸಿನ ಸ್ಥಿತಿ ಹೊಂದಿರಬೇಕು ಎಂದು ಹೇಳಲಾಗಿದೆ. 2025ರ ಮಾರ್ಚ್ 31ರ ಹೊತ್ತಿಗೆ ದೇಶದಲ್ಲಿ ಒಟ್ಟು 1,457 ಪಟ್ಟಣ ಸಹಕಾರ ಬ್ಯಾಂಕುಗಳು ಇದ್ದವು.

ಕೇಂದ್ರ ಸರ್ಕಾರದ ಬಜೆಟ್ ವಿತ್ತೀಯ ಕೊರತೆ ಮೀರದು : ಪಿಡಬ್ಲ್ಯು ಸ್ಟಿ 2
ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನವತಿಯಿಂದ ಪರ್ಯಾಯ ಶ್ರೀ ಶೀರೂರು ಶ್ರೀಪಾದರಿಗೆ ಪಾದಪೂಜೆ 4
ನಿಮ್ಮ ಪ್ರಶ್ನೆ ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



## ಗಣರಾಜ್ಯೋತ್ಸವ ಆಚರಣೆ ಸರ್ಕಾರದ ಸಂಭ್ರಮವಾಗದೆ, ಜನರ ಸಂಭ್ರಮವಾಗಬೇಕು

ಗಣರಾಜ್ಯ ಎಂದರೆ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಜನಪ್ರತಿನಿಧಿಗಳು ದೇಶದ ಆಡಳಿತವನ್ನು ಸಮರ್ಥವಾಗಿ ಮುನ್ನಡೆಸುವ ವ್ಯವಸ್ಥೆ. ಇಲ್ಲಿ ಅಂತಿಮ ಅಧಿಕಾರ ಜನರದ್ದೇ ಆಗಿರುತ್ತದೆ. ನಮ್ಮ ದೇಶ ಜನವರಿ 26, 1950 ರಂದು ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ರಚಿಸಿದ ಸಂವಿಧಾನವನ್ನು ಅಳವಡಿಸಿಕೊಂಡು ಗಣರಾಜ್ಯವಾಗಿ ಬದಲಾಯಿತು ಹಾಗೂ ಅಂದಿನಿಂದ ಸಂಪೂರ್ಣ ಸಾರ್ವಭೌಮ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಪರಿವರ್ತನೆಗೊಂಡಿತು.

ನಾವೆಲ್ಲರೂ ಇದೀಗ ದೇಶದ 77ನೇ ಗಣರಾಜ್ಯೋತ್ಸವ ಆಚರಣೆಯ ಸಂಭ್ರಮದಲ್ಲಿದ್ದೇವೆ. ದೇಶದ ಸಂವಿಧಾನದ ಮಹತ್ವವನ್ನು ನೆನಪಿಸುವ ದಿನವಾಗಿದೆ. ಈ ಆಚರಣೆ, ಸ್ವಾತಂತ್ರ್ಯ ಹೋರಾಟದಲ್ಲಿನ ಜನರ ತ್ಯಾಗ, ಬಲಿದಾನವನ್ನು ನೆನೆಪಿಸುತ್ತದೆ. ಪ್ರಜಾಪ್ರಭುತ್ವದ ಮೌಲ್ಯಗಳ, ಸಂವಿಧಾನದ ಆಶಯಗಳನ್ನು ನೆನಪಿಸುತ್ತದೆ. ನಮ್ಮ ಗಣರಾಜ್ಯದ ಮೂಲ ಆಶಯ ಸಂವಿಧಾನದಲ್ಲೇ ಅಡಕವಾಗಿದೆ. ಸಮಾನತೆ, ಸ್ವಾತಂತ್ರ್ಯ, ನ್ಯಾಯ ಹಾಗೂ ಸಹೋದರತ್ವ ಈ ನಾಲ್ಕು ಮೌಲ್ಯಗಳು ದೇಶದ ಪ್ರಜಾಪ್ರಭುತ್ವದ ಮುಖ್ಯ ಆಧಾರ ಕಂಬಗಳಾಗಿವೆ. ಪ್ರತಿಯೊಬ್ಬ ನಾಗರಿಕನಿಗೂ ಧರ್ಮ, ಜಾತಿ, ಲಿಂಗ, ಭಾಷೆ ಇತ್ಯಾದಿ ಭೇದವಿಲ್ಲದೆ ಸಮಾನ ಹಕ್ಕುಗಳನ್ನು ನಮ್ಮ ಸಂವಿಧಾನ ನಮಗೆ ದಯಪಾಲಿಸಿದೆ.

ಪ್ರತಿ ವರ್ಷ ದೆಹಲಿಯ ಕರ್ತವ್ಯಪಥದಲ್ಲಿ ನಡೆಯುವ ಪಥಸಂಚಲನ, ವಿವಿಧ ಸಾಂಸ್ಕೃತಿಕ ನೃತ್ಯಗಳು, ಸೇನಾ ಶಕ್ತಿ ಸಾಮರ್ಥ್ಯದ ಪ್ರದರ್ಶನಗಳು; ದೇಶದ ಏಕತೆ ಮತ್ತು ವೈವಿಧ್ಯತೆಯನ್ನು ಪ್ರದರ್ಶಿಸುತ್ತವೆ. ಅದೇ ರೀತಿಯಾಗಿ ಎಲ್ಲ ರಾಜ್ಯಗಳ ರಾಜಧಾನಿಗಳಲ್ಲೂ ಗಣರಾಜ್ಯದ ಸಂಭ್ರಮವಿರುತ್ತದೆ. ಆದರೆ ಈ ವೈಭವದ ಆಚರಣೆಯ ಮಧ್ಯೆ, ಸಾಮಾನ್ಯ ನಾಗರಿಕನಿಗೆ ಸಂವಿಧಾನದ ಮೌಲ್ಯಗಳ ಅರ್ಥ ಎಷ್ಟು ತಲುಪುತ್ತಿದೆ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಗಣರಾಜ್ಯೋತ್ಸವವು ಕೆಲವೊಮ್ಮೆ ಆಚರಣೆಯ ಮಟ್ಟಕ್ಕೆ ಸೀಮಿತವಾಗಿ, ಚಿಂತನೆಯ ಹಂತಕ್ಕೆ ತಲುಪದೆ ಹೋಗುತ್ತಿದೆಯೋ ಎನ್ನುವ ಪ್ರಶ್ನೆ ನನ್ನನ್ನು ಕಾಡುತ್ತಿದೆ.

ನಾನು ಗಮನಿಸಿದ ಹಾಗೆ ಇತ್ತೀಚಿನ ವರ್ಷಗಳಲ್ಲಿ ಗಣರಾಜ್ಯೋತ್ಸವದ ಆಚರಣೆಯಲ್ಲಿ ಸ್ಪಷ್ಟ ಬದಲಾವಣೆ ಕಂಡುಬರುತ್ತಿದೆ. ನಮ್ಮ ದೇಶದ ಆತ್ಮವೇ ಅದರ ವೈವಿಧ್ಯತೆ. ಆದರೆ ಗಣರಾಜ್ಯೋತ್ಸವದ ಸಾಂಸ್ಕೃತಿಕ ಆಚರಣೆಯಲ್ಲಿ ಒಂದು ರೀತಿಯ ಸಂಸ್ಕೃತಿಕ ಏಕರೂಪ ಮೇಲುಗೈ ಸಾಧಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ವಿಭಿನ್ನ ಧ್ವನಿಗಳು, ವಿವಿಧ ಸಮುದಾಯಗಳ ಸಂಕಥನಗಳು ಮರೆಗೆ ಸರಿಯುತ್ತಿರುವಂತೆ ಕಾಣುತ್ತಿದೆ. ಅಲ್ಲದೇ ಪ್ರಜಾಪ್ರಭುತ್ವದ ವೈವಿಧ್ಯತೆ ಕೆಲವೊಮ್ಮೆ ಮಂಕಾಗುತ್ತಿರುವಂತೆ ಕಂಡುಬರುತ್ತಿದೆ.

ಗಣರಾಜ್ಯೋತ್ಸವವನ್ನು ನಿಜಾರ್ಥದಲ್ಲಿ ಸಾರ್ಥಕಗೊಳಿಸಬೇಕಾದರೆ, ಸಂವಿಧಾನದ ಮೌಲ್ಯಗಳು ನಮ್ಮ ಆಡಳಿತ, ಸಮಾಜ ಮತ್ತು ವ್ಯಕ್ತಿಗತ ಜೀವನದಲ್ಲಿ ಎಷ್ಟು ಅನುಷ್ಠಾನವಾಗಿವೆ ಎಂಬುದನ್ನು ಅರಿಯುವ ಪ್ರಯತ್ನವಾಗಬೇಕು. ಸಂವಿಧಾನದ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಸಾರ್ವಜನಿಕ ಸಂವಾದಗಳು ನಡೆಯಬೇಕು. ಮುಖ್ಯವಾಗಿ ಗಣರಾಜ್ಯೋತ್ಸವ ಆಚರಣೆ ಆಯಾ ಸರ್ಕಾರಗಳ ಸಂಭ್ರಮವಾಗದೆ, ಜನ ಸಂಭ್ರಮವಾಗಬೇಕು.

ಗಣರಾಜ್ಯೋತ್ಸವ ದಿನದಂದು ಸಂವಿಧಾನವನ್ನು ಅದರ ಮಹತ್ವವನ್ನು ನೆನೆಯುವ, ಅರಿಯುವ ದಿನವಾಗಬೇಕು. ಅದನ್ನು ಪಾಲಿಸುವ ಸಂಕಲ್ಪದ ದಿನವಾಗಬೇಕು. ಅದೇ ಗಣರಾಜ್ಯದ ನಿಜವಾದ ಸಾರ್ಥಕತೆ ಎಂದು ನಾನು ಭಾವಿಸುತ್ತೇನೆ. ಪ್ರಜೆಗಳಾದ ನಾವುಗಳು ಗಣರಾಜ್ಯೋತ್ಸವ ದಿನದಂದು ಈ ಆಶಯಗಳನ್ನು ಸಾಕಾರಗೊಳಿಸುವತ್ತ ಸಾಗಬೇಕು.

▶▶ ಎಚ್.ಕೆ. ಪಾಟೀಲ

## ಕೇಂದ್ರ ಸರ್ಕಾರದ ಬಜೆಟ್ ವಿತ್ತೀಯ ಕೊರತೆ ಮೀರದು : ಪಿಡಬ್ಲ್ಯುಸಿ

**ನವದೆಹಲಿ :** 'ಪ್ರಸಕ್ತ ಆರ್ಥಿಕ ವರ್ಷದ ಬಜೆಟ್‌ನಲ್ಲಿ ಅಂದಾಜು ಮಾಡಲಾಗಿರುವ ವಿತ್ತೀಯ ಕೊರತೆಯ ಮಿತಿಯನ್ನು ಕೇಂದ್ರ ಸರ್ಕಾರವು ಮೀರುವುದಿಲ್ಲ ಎಂಬ ನಿರೀಕ್ಷೆ ಇದೆ' ಎಂದು ಪಿಡಬ್ಲ್ಯುಸಿ ಪಾಲುದಾರ ರಾನೆನ್ ಬ್ಯಾನರ್ಜಿ ಹೇಳಿದ್ದಾರೆ. ಜಿಡಿಪಿಯ ಶೇ.4.4ರಷ್ಟಕ್ಕೆ ವಿತ್ತೀಯ ಕೊರತೆಯನ್ನು ಮಿತಿಗೊಳಿಸುವ ಉದ್ದೇಶವನ್ನು ಕೇಂದ್ರ ಬಜೆಟ್‌ನಲ್ಲಿ ಹೇಳಿದೆ.




ಇದು ಹಣಕಾಸು ನಿರ್ವಹಣೆಯ ವಿಚಾರವಾಗಿ ದೇಶವು ಹೊಂದಿರುವ ಬದ್ಧತೆಯ ಬಗ್ಗೆ ಜಾಗತಿಕ ಮಟ್ಟದ ಹೂಡಿಕೆದಾರರಿಗೆ ನೀಡಿರುವ ಸಕಾರಾತ್ಮಕ ಸಂದೇಶ ಎಂದು ಅವರು ಹೇಳಿದ್ದಾರೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಜಿಡಿಪಿ ಬೆಳವಣಿಗೆಯ ಗುರಿಯನ್ನು (ಹಣದುಬ್ಬರದ ಪರಿಣಾಮವನ್ನು ಪರಿಗಣನೆಗೆ ತೆಗೆದುಕೊಳ್ಳದೆ) ಶೇ 10.1ರಿಂದ ಶೇ 8ಕ್ಕೆ ಪರಿಷ್ಕರಿಸಿತ್ತು. ಇದು ವಿತ್ತೀಯ ಕೊರತೆಯ ಗುರಿಯನ್ನು ಸಾಧಿಸುವ ಸರ್ಕಾರದ ಸಾಮರ್ಥ್ಯದ ಬಗ್ಗೆ ಕಳವಳ ಹುಟ್ಟುಹಾಕಿತ್ತು.

2024–25ರ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ಶೇ 4.8ರಷ್ಟು ವಿತ್ತೀಯ ಕೊರತೆಯ ಗುರಿಯನ್ನು ಸಾಧಿಸಿತ್ತು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಮಂಡನೆ ವೇಳೆ, 2025–26ರ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.4ಕ್ಕೆ (ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ರೂ.15.69 ಲಕ್ಷ ಕೋಟಿ) ತಗ್ಗಿಸಲು ಸರ್ಕಾರ ಬಜೆಟ್‌ನಲ್ಲಿ ಗುರಿ ನಿಗದಿ ಮಾಡಲಾಗಿದೆ ಎಂದು ಹೇಳಿದ್ದರು.

# ಐದೂವರೆ ವರ್ಷಗಳಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ಒಟ್ಟು ರೂ.6.15 ಲಕ್ಷ ಕೋಟಿ ಸಾಲ ಮನ್ನಾ

ಕಳೆದ 5 ಹಣಕಾಸು ವರ್ಷಗಳು ಮತ್ತು ಪ್ರಸ್ತುತ ಹಣಕಾಸು ವರ್ಷದ (2025–26) ಸೆಪ್ಟೆಂಬರ್ ವರೆಗೆ, ಅಂದರೆ ಒಟ್ಟು ಐದೂವರೆ ವರ್ಷಗಳಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು ಲಕ್ಷಾಂತರ ಕೋಟಿ ಮೌಲ್ಯದ ಸಾಲಗಳನ್ನು ತಾಂತ್ರಿಕವಾಗಿ ರದ್ದುಪಡಿಸಿವೆ. ಅಂದರೆ, ಲೋನ್ ರೈಟ್‌ಆಫ್ ಮಾಡಿವೆ. ಕೇಂದ್ರ ಹಣಕಾಸು ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಸಂಸತ್ತಿನಲ್ಲಿ ಈ ವಿಷಯಗಳನ್ನು ಬಹಿರಂಗಪಡಿಸಿದ್ದಾರೆ. ಬರೋಬ್ಬರಿ ರೂ.6,15,647 ಕೋಟಿ ಅಥವಾ ರೂ.6.15 ಲಕ್ಷ ಕೋಟಿ ಸಾಲಗಳನ್ನು ರೈಟ್‌ಆಫ್ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ. ಸಾಲಗಳನ್ನು ರೈಟ್‌ಆಫ್ ಮಾಡುವುದು ಸಾಲ ಮನ್ನಾ ಅಡಿಯಲ್ಲಿ ಬರುವುದಿಲ್ಲ, ಇದು ಕೇವಲ ಹಣಕಾಸಿನ ಪ್ರಕ್ರಿಯೆ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಸಾಮಾನ್ಯವಾಗಿ ರೈಟ್‌ಆಫ್ ಎಂದರೆ, ಆರ್‌ಬಿಐ ಮಾರ್ಗಸೂಚಿಗಳು ಮತ್ತು ಬ್ಯಾಂಕ್ ಮಂಡಳಿಗಳು ಅನುಮೋದಿಸಿದ ನೀತಿಗಳ ಪ್ರಕಾರ, ನಿಷ್ಕ್ರಿಯ ಆಸ್ತಿಗಳಾಗಿ ಮಾರ್ಪಟ್ಟ ನಾಲ್ಕು ವರ್ಷಗಳ ನಂತರ, ಸಂಪೂರ್ಣವಾಗಿ ನಿಬಂಧನೆಗಳನ್ನು ಮಾಡಿದ ಸಾಲಗಳನ್ನು ಬ್ಯಾಂಕುಗಳು ತಮ್ಮ ಬ್ಯಾಲೆನ್ಸ್ ಶೀಟ್‌ನಿಂದ ತೆಗೆದುಹಾಕಲು ಹೀಗೆ ರೈಟ್‌ಆಫ್ ಮಾಡುತ್ತವೆ. ಇನ್ನೊಂದು ಸರಳ ಭಾಷೆಯಲ್ಲಿ ಹೇಳುವುದಾದರೆ, ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯು ಬಾಕಿ ಉಳಿದಿರುವ ಸಾಲವನ್ನು ಮರುಪಾವತಿ ಮಾಡುವುದು ಅಸಾಧ್ಯ ಎಂದು ನಿರ್ಧರಿಸಿದಾಗ, ಆ ಸಾಲದ ಮೊತ್ತವನ್ನು ತಮ್ಮ ಲೆಕ್ಕಪತ್ರ ಪುಸ್ತಕಗಳಿಂದ ಅಧಿಕೃತವಾಗಿ ತೆಗೆದುಹಾಕುತ್ತದೆ.

ಸಾಲ ರೈಟ್‌ಆಫ್ ಎಂದರೆ ಆ ಸಾಲಗಾರನಿಗೆ ಮನ್ನಾ ನೀಡಲಾಗಿದೆ ಎಂದರ್ಥವಲ್ಲ. ಸಾಲಗಾರನು ಇನ್ನೂ ಸಾಲವನ್ನು ಮರುಪಾವತಿಸುವ ಜವಾಬ್ದಾರಿಯನ್ನು ಹೊಂದಿರುತ್ತಾನೆ. ಬ್ಯಾಂಕುಗಳು ತಮ್ಮ ಬ್ಯಾಲೆನ್ಸ್ ಶೀಟ್‌ಅನ್ನು ಸ್ಪಷ್ಟವಾಗಿ ಇಟ್ಟುಕೊಳ್ಳಲು ಮತ್ತು ವಸೂಲಾಗದ ಬಾಕಿಗಳ ಹೊರೆಯನ್ನು ಕಡಿಮೆ ಮಾಡಲು ಈ ಕ್ರಮವನ್ನು ಕೈಗೊಳ್ಳುತ್ತವೆ ಎಂದು ಹೇಳಬಹುದು. ರೈಟ್‌ಆಫ್ ಮಾಡಿದರೂ, ಇದು ಸಾಲಗಾರನ ಕ್ರೆಡಿಟ್ ಸ್ಕೋರ್ ಮೇಲೆ ತೀವ್ರ





ನಕಾರಾತ್ಮಕ ಪರಿಣಾಮ ಬೀರುತ್ತದೆ. ಇದು ಭವಿಷ್ಯದಲ್ಲಿ ಅವರಿಗೆ ಸಾಲಗಳು ಸಿಗುವುದನ್ನು ತಡೆಯುತ್ತದೆ.

ಕೇಂದ್ರ ಸಚಿವರು ಇದೇ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ರೈಟ್‌ಆಫ್ ಮಾಡಿದರೂ ಸಹ, ಬ್ಯಾಂಕುಗಳು ಸಾಲ ವಸೂಲಾತಿ ಪ್ರಕ್ರಿಯೆಯನ್ನು ಮುಂದುವರಿಸುತ್ತವೆ. ಸಾಲ ವಸೂಲಾತಿ ನ್ಯಾಯಮಂಡಳಿಗಳು ರಾಷ್ಟ್ರೀಯ ಕಾನೂನು ಕಂಪನಿ ನ್ಯಾಯಮಂಡಳಿ ಮುಂತಾದ ಕಾನೂನು ಮಾರ್ಗಗಳ ಮೂಲಕ ಮತ್ತು ಲೋನ್ ರಿಕವರಿ ಏಜೆಂಟ್‌ಗಳ ಮೂಲಕ ಆ ಮೊತ್ತವನ್ನು ವಸೂಲಿ ಮಾಡಲು ಪ್ರಯತ್ನಿಸುತ್ತವೆ ಎಂದು ಪಂಕಜ್ ಚೌಧರಿ ತಿಳಿಸಿದ್ದಾರೆ. ಇನ್ನು, ಕಳೆದ ಐದು ವರ್ಷಗಳಲ್ಲಿ ರೈಟ್‌ಆಫ್ ಮಾಡಿದ ಸಾಲಗಳಿಂದ ಸರ್ಕಾರಿ ವಲಯದ ಬ್ಯಾಂಕುಗಳು ಕೇವಲ ರೂ.1.65 ಲಕ್ಷ ಕೋಟಿ ಯನ್ನು ಮಾತ್ರ ಮರುಪಡೆಯಲು ಸಾಧ್ಯವಾಗಿದೆ.

ದೊಡ್ಡ ಪ್ರಮಾಣದಲ್ಲಿ ಸಾಲ ರೈಟ್‌ಆಫ್ ಮಾಡಿದ್ದರೂ ಸಹ, ಸರ್ಕಾರಿ ವಲಯದ ಬ್ಯಾಂಕುಗಳ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ ಮತ್ತು ಇತ್ತೀಚಿನ ದಿನಗಳಲ್ಲಿ ಮತ್ತಷ್ಟು ಸುಧಾರಿಸಿದೆ ಎಂದು ಕೇಂದ್ರ ಸಚಿವರು ತಿಳಿಸಿದ್ದಾರೆ. 2022–23 ರ ಹಣಕಾಸು ವರ್ಷದಿಂದ ಸರ್ಕಾರವು ಸರ್ಕಾರಿ ಬ್ಯಾಂಕುಗಳಿಗೆ ಯಾವುದೇ ಬಂಡವಾಳ ನೆರವು ನೀಡಿಲ್ಲ ಎಂದು ಅವರು ತಿಳಿಸಿದ್ದಾರೆ.

ಪ್ರಸ್ತುತ ಆ ಬ್ಯಾಂಕುಗಳು ತಮ್ಮ ಬಂಡವಾಳದ ಅಗತ್ಯಗಳನ್ನು ಪೂರೈಸಲು ಮಾರುಕಟ್ಟೆ ಸೇರಿದಂತೆ ಇತರ ಸಂಪನ್ಮೂಲಗಳನ್ನು ಅವಲಂಬಿಸಿವೆ ಎಂದು ಹೇಳಿದರು. ಇಕ್ವಿಟಿ ಮತ್ತು ಬಾಂಡ್‌ಗಳನ್ನು ವಿತರಿಸುವ ಮೂಲಕ ಸರ್ಕಾರಿ ಬ್ಯಾಂಕುಗಳು 2022–25 ರ ಅವಧಿಯಲ್ಲಿ ರೂ. 1.79 ಲಕ್ಷ ಕೋಟಿ ಸಂಗ್ರಹಿಸಿವೆ ಎಂದು ತಿಳಿಸಿದರು. ಬ್ಯಾಂಕಿಂಗ್ ವಂಚನೆಗಳಲ್ಲಿ ವಂಚಕರು ರೂ. 3,588.22 ಕೋಟಿ ವಂಚಿಸಿದ್ದು, ಅದರಲ್ಲಿ ರೂ.238 ಕೋಟಿ ವಸೂಲಾಗಿದೆ ಎಂದು ಸಚಿವರು ವಿವರಿಸಿದರು.



# ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ ವತಿಯಿಂದ ಪರ್ಯಾಯ ಶ್ರೀ ಶೀರೂರು ಶ್ರೀಪಾದರಿಗೆ ಪಾದಪೂಜೆ




**ಉಡುಪಿ:** ಶ್ರೀ ಶ್ರೀ ವೇದವರ್ಧನತೀರ್ಥ ಶ್ರೀಪಾದರು, ಶ್ರೀ ಶೀರೂರು ಮಠ, ಉಡುಪಿ ಇವರ ಪಾದ ಪೂಜೆಯನ್ನು ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕ್‌ನ ಮುಖ್ಯ ಶಾಖೆಯ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ ದಂಪತಿಗಳು ನೆರವೇರಿಸಿದರು.

ಈ ಸಂದರ್ಭದಲ್ಲಿ ಸ್ವಾಮೀಜಿಯವರು ತಮ್ಮ ಪರ್ಯಾಯ ಮಹೋತ್ಸವಕ್ಕೆ ಸ್ವಾಗತಿಸಿ ಎಲ್ಲರ ಸಹಕಾರವನ್ನು ಬಯಸಿದರು. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಪಿ. ರಾಘವೇಂದ್ರ ಭಟ್, ನಿರ್ದೇಶಕರಾದ ಶ್ರೀ ಪಿ.ಎನ್. ರವೀಂದ್ರರಾವ್, ಶ್ರೀಮತಿ ಮನೋರಮಾ ಎಸ್., ಶ್ರೀ ಎನ್. ಪ್ರಹ್ಲಾದ್ ಬಲ್ಲಾಳ್, ಶ್ರೀ ಭಾಸ್ಕರರಾವ್ ಕಿದಿಯೂರು, ಶ್ರೀ ಸೂರ್ಯಪ್ರಕಾಶ್ ರಾವ್‌ಎನ್., ಶ್ರೀ ಕೆ. ಮುರಳೀಧರ ಭಟ್, ಶ್ರೀ ಸೀತಾರಾಮ ಕೇಕುಡ, ಡಾ. ಪಡುಬಿದ್ರಿ ಶ್ರೀಪತಿ ರಾವ್, ಶ್ರೀ ಜಯಪ್ರಕಾಶ ಭಂಡಾರಿ, ಶ್ರೀ ದೇವದಾಸ್, ಶ್ರೀಮತಿ ರೂಪಾ ಮೋಹನ್, ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ನ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ನಾವಡ, ಸದಸ್ಯರಾದ ಶ್ರೀ ವೆಂಕಟೇಶ ಮಿತ್ತ್ಯಾಂತಾಯ, ಶ್ರೀ ಶ್ರೀಕೃಷ್ಣ ಎಲ್. ಆಚಾರ್ಯ, ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯ, ಮುಖ್ಯ ಸಲಹೆಗಾರರಾದ ಶ್ರೀ ಎಸ್. ಕುಮಾರಸ್ವಾಮಿ ಉಡುಪ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ನಂತರ ಸ್ವಾಮೀಜಿಯವರು ಫಲ ಮಂತ್ರಾಕ್ಷತೆಯನ್ನು ಆಡಳಿತ ಮಂಡಳಿಯವರಿಗೆ ಹಾಗೂ ಬ್ಯಾಂಕಿನ ಎಲ್ಲ ಸಿಬ್ಬಂದಿಗಳಿಗೆ ನೀಡಿ ಆಶೀರ್ವಚಿಸಿದರು.

## ಮಡಿಕೇರಿಯಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರಿಗೆ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ದಿನಾಂಕ: 28ನೇ ಜನವರಿ 2026ರ ಬುಧವಾರದಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರಿಗೆ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು "ನ್ಯೂ ರಾಜ ದರ್ಶನ ಪಾರ್ಟಿ ಹಾಲ್" ರಾಜಾ ಸೀಟ್ ಹತ್ತಿರ, ಎಮ್.ಜಿ.ರಸ್ತೆ, ಮಡಿಕೇರಿ ಇಲ್ಲಿ ಏರ್ಪಡಿಸಲಾಗಿರುತ್ತದೆ.

ಸದರಿ ವಿಚಾರ ಸಂಕಿರಣದಲ್ಲಿ Role of Board of Directors for UCBs, Important Provisions of KCS Act and Recent Amendment, Technology Adoption – Role of NPCI and its Products, Recent RBI Guidelines ವಿಷಯಗಳ ಕುರಿತು ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಸದರಿ ಕಾರ್ಯಕ್ರಮವನ್ನು ದಿನಾಂಕ:28.01.2026ರಂದು ಬೆಳಗ್ಗೆ 08.30 ಗಂಟೆಗೆ ಉಪಹಾರ ಹಾಗೂ ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು. ಸದರಿ ವಿಚಾರ ಸಂಕಿರಣದಲ್ಲಿ ಭಾಗವಹಿಸುವವರು ಮಹಾಮಂಡಳದಲ್ಲಿ ದಿನಾಂಕ : 23.01.2026 ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಈ ವಿಚಾರ ಸಂಕಿರಣದಲ್ಲಿ ತಪ್ಪದೇ ಭಾಗವಹಿಸಿ ಇದರ ಸದುಪಯೋಗಪಡೆದುಕೊಳ್ಳಬೇಕೆಂದು ವಿನಂತಿಸಲಾಗಿದೆ.



## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

**ಬೆಂಗಳೂರು:** ದಿ ಸಿಟಿಜನ್ ಕೋ–ಆಪರೇಟಿವ್ ಬ್ಯಾಂಕ್ ನಿ., ಬೆಂಗಳೂರು ಇದರ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಮಾರಾಟಾಧಿಕಾರಿ ಶ್ರೀ ಆರ್.ಎನ್. ಮಧುಕರರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ್ ಎನ್. ಕೇರೂರೆಯವರಿಗೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಸಾಲ ವಸೂಲಾಧಿಕಾರಿ ಶ್ರೀ ಬಿ. ಇಂದ್ರ ಕುಮಾರರವರು ಉಪಸ್ಥಿತರಿದ್ದರು.

# ಬೆಂಗಳೂರು ಮಹಿಳಾ ಕೋ–ಆಪರೇಟಿವ್ ಬ್ಯಾಂಕಿಗೆ ರಾಷ್ಟ್ರೀಯ ಶ್ರೇಷ್ಠತೆ ಪ್ರಶಸ್ತಿ



**ಬೆಂಗಳೂರು :** ಮಹಿಳಾ ಕೋ–ಆಪರೇಟಿವ್ ಬ್ಯಾಂಕಿಗೆ, ಸಹಕಾರ ವರ್ಗದಲ್ಲಿ ನೀಡಲಾಗುವ ರಾಷ್ಟ್ರೀಯ ಶ್ರೇಷ್ಠತೆ ಪ್ರಶಸ್ತಿ (National Excellence Award) ಲಭಿಸಿರುವುದು ನಮ್ಮ ಬ್ಯಾಂಕಿಗೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಈ ಪ್ರಶಸ್ತಿಯನ್ನು ದಿನಾಂಕ: 06.12.2025 ರಂದು ಬೆಂಗಳೂರಿನ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (MAHE) ನಲ್ಲಿ ನಡೆದ Global Co-operation Development Sumit, 2025 ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಯಿತು. ಬ್ಯಾಂಕಿನ ಪರವಾಗಿ ಅಧ್ಯಕ್ಷರು ಶ್ರೀಮತಿ. ಗೀತಾ ಎಂ. ರವರು ಪ್ರಶಸ್ತಿಯನ್ನು ಸ್ವೀಕರಿಸಿರುತ್ತಾರೆ.

# ಎರಡು ಸಾರ್ವಜನಿಕ ಬ್ಯಾಂಕುಗಳ ವಿಲೀನಕ್ಕೆ ಸಿದ್ಧತೆ : ದೇಶದ ಎರಡನೇ ಅತಿದೊಡ್ಡ ಬ್ಯಾಂಕ್ ಆಗಿ ಹೊರಹೊಮ್ಮುವ ಸಾಧ್ಯತೆ

ಭಾರತೀಯ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮತ್ತಷ್ಟು ದೊಡ್ಡ ಬದಲಾವಣೆಗಳಿಗೆ ಕೇಂದ್ರ ಸರ್ಕಾರ ಸಿದ್ಧತೆ ನಡೆಸುತ್ತಿದೆ ಎಂಬ ಚರ್ಚೆಗಳು ಜೋರಾಗಿವೆ. ಈ ಹಿಂದೆ ಹತ್ತು ಸರ್ಕಾರಿ ಬ್ಯಾಂಕುಗಳನ್ನು ನಾಲ್ಕು ಬ್ಯಾಂಕುಗಳಾಗಿ ವಿಲೀನಗೊಳಿಸಲಾಗಿತ್ತು. ಈಗ ಎರಡನೇ ಹಂತದ ವಿಲೀನ ಪ್ರಕ್ರಿಯೆಗೆ ಕೇಂದ್ರ ಸರ್ಕಾರ ಮುಂದಾಗಿದ್ದು, ಎರಡು ಪ್ರಮುಖ ಬ್ಯಾಂಕುಗಳನ್ನು ಒಂದುಗೂಡಿಸಿ ದೇಶದ ಎರಡನೇ ಅತಿದೊಡ್ಡ ಬ್ಯಾಂಕನ್ನಾಗಿ ಮಾಡುವ ಗುರಿ ಹೊಂದಿದೆ ಎಂದು ವರದಿಯಾಗಿದೆ.

**ಯಾವ ಬ್ಯಾಂಕುಗಳ ವಿಲೀನ? :** ಇತ್ತೀಚಿನ ವರದಿಗಳ ಪ್ರಕಾರ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕುಗಳನ್ನು ವಿಲೀನಗೊಳಿಸುವ ಸಾಧ್ಯತೆಯಿದೆ. ಈ ಎರಡೂ ಬ್ಯಾಂಕುಗಳು ಒಂದಾದರೆ, ಭಾರತೀಯ ಸ್ಟೇಟ್ ಬ್ಯಾಂಕ್ ನಂತರ ಇದು ದೇಶದ ಎರಡನೇ ಅತಿದೊಡ್ಡ ಸರ್ಕಾರಿ ಬ್ಯಾಂಕ್ ಎನಿಸಿಕೊಳ್ಳಲಿದೆ. ಈ ಕುರಿತು ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ.

**ಸರ್ಕಾರದ ಗುರಿ ಏನು? :** ಪ್ರಸ್ತುತ ದೇಶದಲ್ಲಿ 12 ಸರ್ಕಾರಿ ಬ್ಯಾಂಕುಗಳಿವೆ. ಕೇಂದ್ರದ ಈ ವಿಲೀನ ಯೋಜನೆಯ ಹಿಂದೆ ಕೆಲವು ಪ್ರಮುಖ ಉದ್ದೇಶಗಳಿವೆ:

**ಅಂತರರಾಷ್ಟ್ರೀಯ ಸ್ಪರ್ಧೆ :** ವಿಶ್ವದ ಟಾಪ್–50 ಬ್ಯಾಂಕುಗಳ ಪಟ್ಟಿಯಲ್ಲಿ ಭಾರತದ ಹೆಚ್ಚಿನ ಬ್ಯಾಂಕುಗಳು ಸ್ಥಾನ ಪಡೆಯುವಂತೆ ಮಾಡುವುದು.

- **ವೆಚ್ಚ ಕಡಿತ :** ಬೇರೆ ಬೇರೆ ಬ್ಯಾಂಕುಗಳ ನಿರ್ವಹಣಾ ವೆಚ್ಚವನ್ನು ಕಡಿಮೆ ಮಾಡುವುದು.
- **ಬಂಡವಾಳ ವೃದ್ಧಿ :** ಬ್ಯಾಂಕುಗಳ ಬಂಡವಾಳ ಸಾಮರ್ಥ್ಯವನ್ನು ಹೆಚ್ಚಿಸಿ, ಸಾಲ ನೀಡುವ ಶಕ್ತಿಯನ್ನು ಬಲಪಡಿಸುವುದು.
- ವಸೂಲಾಗದ ಸಾಲದ ಹೊರೆಯನ್ನು ತಗ್ಗಿಸುವುದು.

ಇದಲ್ಲದೆ, ಬ್ಯಾಂಕ್ ಆಫ್ ಮಹಾರಾಷ್ಟ್ರ, ಇಂಡಿಯನ್ ಓವರ್ಸೀಸ್ ಬ್ಯಾಂಕ್ ಮತ್ತು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಂತಹ ಬ್ಯಾಂಕುಗಳನ್ನು ಇತರ




ಬಲಿಷ್ಠ ಬ್ಯಾಂಕುಗಳೊಂದಿಗೆ ವಿಲೀನಗೊಳಿಸುವ ಅಥವಾ ಖಾಸಗೀಕರಣಗೊಳಿಸುವ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ ಎನ್ನಲಾಗಿದೆ.

**ಖಾತೆದಾರರ ಮೇಲೆ ಆಗುವ ಪರಿಣಾಮಗಳೇನು?**

**ಬ್ಯಾಂಕ್ ವಿಲೀನವಾದಾಗ ಗ್ರಾಹಕರು ಕೆಲವು ಬದಲಾವಣೆಗಳನ್ನು ಎದುರಿಸಬೇಕಾಗುತ್ತದೆ:**

**ದಾಖಲೆಗಳ ಬದಲಾವಣೆ :** ಚೆಕ್ ಬುಕ್, ಪಾಸ್ ಬುಕ್ ಮತ್ತು IFSC ಕೋಡುಗಳು ಬದಲಾಗುತ್ತವೆ.

- **ಡಿಜಿಟಲ್ ಬ್ಯಾಂಕಿಂಗ್ :** ಮೊಬೈಲ್ ಆ್ಯಪ್‌ಗಳು ಮತ್ತು ಇಂಟರ್ನೆಟ್ ಬ್ಯಾಂಕಿಂಗ್ ಪ್ಲಾಟ್ ಫಾರಂಗಳು ಬದಲಾಗಬಹುದು.
- **ಶಾಖೆಗಳ ಸ್ಥಳಾಂತರ :** ಒಂದೇ ಪ್ರದೇಶದಲ್ಲಿ ಎರಡು ಬ್ಯಾಂಕುಗಳ ಶಾಖೆಗಳಿದ್ದರೆ, ಅವುಗಳನ್ನು ವಿಲೀನಗೊಳಿಸಿ ಒಂದು ಶಾಖೆಯನ್ನಾಗಿ ಮಾಡುವ ಸಾಧ್ಯತೆ ಇರುತ್ತದೆ.

## 12ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಲಿಖಿತ ಪರೀಕ್ಷೆಗಳು ದಿನಾಂಕ : 14.02.2026,15.02.2026 ಮತ್ತು 28.02.2026 ಹಾಗೂ 01.03.2026ರಂದು ಜರುಗಲಿವೆ.

**ಬೆಂಗಳೂರು:** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ್ನು ಆರ್.ಐ.ಸಿ.ಎಂ., ಬೆಂಗಳೂರು ಈ ಸಂಸ್ಥೆಯ ಸಹಯೋಗದೊಂದಿಗೆ ಏರ್ಪಡಿಸಲಾಗಿದೆ.

ಬೆಂಗಳೂರು ವಿಭಾಗಕ್ಕೆ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ದಿನಾಂಕ : 14.02.2026, 15.02.2026 ಮತ್ತು 28.02.2026 ಹಾಗೂ 01.03.2026 ರವರೆಗೆ ಒಟ್ಟು ನಾಲ್ಕು ದಿನಗಳು ಬೆಳಿಗ್ಗೆ 09.30 ರಿಂದ ಸಾಯಂಕಾಲ 05.30 ಗಂಟೆಯವರೆಗೆ ಲಿಖಿತ ಪರೀಕ್ಷೆಗಳು ಆರ್.ಐ.ಸಿ.ಎಂ. ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು–560070 ಇಲ್ಲಿ ನಡೆಯಲಿವೆ.

ವಿಜಯಪುರ ವಿಭಾಗಕ್ಕೆ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ದಿನಾಂಕ : 14.02.2026, 15.02.2026 ಮತ್ತು 28.02.2026 ಹಾಗೂ 01.03.2026 ರವರೆಗೆ ಒಟ್ಟು ನಾಲ್ಕು ದಿನಗಳು ಬೆಳಿಗ್ಗೆ 09.30 ರಿಂದ ಸಾಯಂಕಾಲ 05.30 ಗಂಟೆಯವರೆಗೆ ಲಿಖಿತ ಪರೀಕ್ಷೆಗಳು "ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಪ್ರೌಢಶಾಲೆ" ವಿವೇಕನಗರ, ವಿಜಯಪುರ – 586 109 ಇಲ್ಲಿ ನಡೆಯಲಿವೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಉಪಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ಶ್ರೀ ಅನಿಲ್ ಎಚ್. ಕಿರೇಸೂರ (7411332655) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9110642779) ಇವರುಗಳನ್ನು ಸಂಪರ್ಕಿಸಬಹುದಾಗಿದೆ.

## ಏಪ್ರಿಲ್‌ನಿಂದ ಯುಪಿಐ ಮೂಲಕ ಇಪಿಎಫ್ ಹಿಂತೆಗೆದುಕೊಳ್ಳಬಹುದು

**ನವದೆಹಲಿ:** ನೌಕರರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಚಂದಾದಾರರು ಪ್ರಸಕ್ತ ಸಾಲಿನ ಏಪ್ರಿಲ್ ನಂತರ ನೌಕರರ ಭವಿಷ್ಯ ನಿಧಿಯನ್ನು (ಇಪಿಎಫ್) ಯುಪಿಐ ಆಧಾರಿತ ಪಾವತಿ ಮೂಲಕ ಹಿಂತೆಗೆದುಕೊಳ್ಳಬಹುದು. ಯುಪಿಐ 'ಆಟೊ ಸೆಟಲ್‌ಮೆಂಟ್' ಆಯ್ಕೆಯಡಿ ಅರ್ಜಿ ಸಲ್ಲಿಸಿದ ಮೂರು ದಿನಗಳಲ್ಲೇ ಮೊತ್ತವು ಚಂದಾದಾರರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಆಗುತ್ತದೆ. ಭವಿಷ್ಯನಿಧಿ ಹಿಂತೆಗೆದುಕೊಳ್ಳುವಾಗ ಹಳೆಯ ವ್ಯವಸ್ಥೆಯಲ್ಲಿ ಆಗುತ್ತಿದ್ದ ವಿಳಂಬವು ಹೊಸ ವ್ಯವಸ್ಥೆಯಲ್ಲಿ ತಪ್ಪಲಿದೆ ಎಂದು ಮೂಲಗಳು ತಿಳಿಸಿವೆ.




ಭವಿಷ್ಯನಿಧಿಯನ್ನು ಹಿಂತೆಗೆದುಕೊಳ್ಳುವುದು ಮಾತ್ರವಲ್ಲ, ಬಾಕಿ ಉಳಿದಿರುವ ಮೊತ್ತವನ್ನೂ ಯುಪಿಐ ಮೂಲಕ ಪರಿಶೀಲಿಸಿಕೊಳ್ಳಬಹುದು. ಉದ್ಯೋಗಿ ಮತ್ತು ಉದ್ಯೋಗದಾತ ಕಂಪನಿ ಇಬ್ಬರ ಪಾಲೂ ಸೇರಿ ಒಟ್ಟು ಅರ್ಹವಿರುವ ಶೇ.100ರಷ್ಟು ಮೊತ್ತವನ್ನೂ ಹಿಂತೆಗೆದುಕೊಳ್ಳಲು ಕಾರ್ಮಿಕರಿಗೆ ಅವಕಾಶವಿದೆ.

ಇಪಿಎಫ್ ಖಾತೆಯಿಂದ ಬ್ಯಾಂಕ್ ಖಾತೆಗೆ ಹಣವು ಸುರಕ್ಷಿತವಾಗಿ ವರ್ಗಾವಣೆಯಾಗಲು, ಚಂದಾದಾರರು ತಮ್ಮ ಲಿಂಕ್ ಮಾಡಲಾದ ಯುಪಿಐ ಪಿನ್ ಬಳಸಬೇಕು. ಒಮ್ಮೆ ಹಣವು ಬ್ಯಾಂಕ್ ಖಾತೆಗೆ ಜಮಾಗೊಂಡ ನಂತರ, ಆ ಮೊತ್ತವನ್ನು ಇನ್ನೊಂದು ಖಾತೆಗೆ ವರ್ಗಾಯಿಸಿಕೊಳ್ಳಲು ಅಥವಾ ಎಟಿಎಂ ಮೂಲಕ ತೆಗೆದುಕೊಳ್ಳಲು ಚಂದಾದಾರರಿಗೆ ಅವಕಾಶವಿರುತ್ತದೆ. ಸದ್ಯ ಯುಪಿಐ ಆಧಾರಿತ ಪಾವತಿ ವ್ಯವಸ್ಥೆಯಲ್ಲಿನ ಸಾಫ್ಟ್‌ವೇರ್ ಲೋಪಗಳನ್ನು ಇಪಿಎಫ್‌ಒ ಸರಿಪಡಿಸುತ್ತಿದೆ. ಈ ಯೋಜನೆ ಜಾರಿಗೆ ಬಂದರೆ ಸುಮಾರು 8 ಕೋಟಿಯಷ್ಟು ಚಂದಾದಾರರಿಗೆ ಅನುಕೂಲವಾಗಲಿದೆ.

ತುರ್ತು ಹಣಕಾಸು ಅಗತ್ಯ ಇರುವ ಕಾರ್ಮಿಕರಿಗೆ ನೆರವಾಗುವ ಉದ್ದೇಶದಿಂದ ಕೋವಿಡ್–19 ಸಂದರ್ಭದಲ್ಲಿ ಇಪಿಎಫ್‌ಒ ಮೊದಲ ಬಾರಿಗೆ ಆನ್‌ಲೈನ್ ಆಟೊ ಸೆಟಲ್‌ಮೆಂಟ್ ಆಯ್ಕೆಯನ್ನು ಪರಿಚಯಿಸಿತ್ತು.

ಪ್ರತಿವರ್ಷ ಸುಮಾರು 5ಲಕ್ಷದಷ್ಟು ಇಪಿಎಫ್ ಕ್ಲೇಮ್‌ಗಳನ್ನು ಇಪಿಎಫ್‌ಒ ಇತ್ಯರ್ಥಪಡಿಸುತ್ತದೆ. ಇಪಿಎಫ್‌ಒ ಯಾವುದೇ ಬ್ಯಾಂಕಿಂಗ್ ಪರವಾನಗಿ ಹೊಂದಿರದ ಕಾರಣ, ಚಂದಾದಾರರಿಗೆ ಇಪಿಎಫ್ ಖಾತೆಗಳಿಂದ ನೇರವಾಗಿ ಹಣವನ್ನು ಹಿಂತೆಗೆದುಕೊಳ್ಳಲು ಅವಕಾಶ ಇರುವುದಿಲ್ಲ.




## ನಿಮ್ಮ ಪ್ರಶ್ನೆ ನಮ್ಮ ಉತ್ತರ



» ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.

**01. ಇತ್ತೀಚಿನ ರಿಜರ್ವ್ ಬ್ಯಾಂಕ್ ನಿರ್ದೇಶನದ ಪ್ರಕಾರ ಪಟ್ಟಣ ಸಹಕಾರ ಬ್ಯಾಂಕಿನ ನಿರ್ದೇಶಕರು ತಮ್ಮ ಬ್ಯಾಂಕಿನಿಂದ "ನೌಕರರಿಗೆ ನೀಡುವ ಮಿತಿ"ಯಲ್ಲಿ ವೈಯಕ್ತಿಕ ಸಾಲ ಪಡೆಯುವ ಅವಕಾಶವಿದೆ. ಹೀಗಿರುವಾಗ ಒಬ್ಬ ನಿರ್ದೇಶಕರಿಗೆ ರೂ.10ಲಕ್ಷದಷ್ಟು ಅಸುರಕ್ಷಿತ ಸಾಲ ನೀಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಮಂಗಳೂರು.**

**ಉತ್ತರ:** ಬ್ಯಾಂಕಿನ ಉದ್ಯೋಗಿಗಳಿಗೆ ಯಾವ ಮಿತಿಯವರೆಗೆ ಮತ್ತು ಯಾವ ನಿಯಮಗಳ ಅಡಿಯಲ್ಲಿ ಸಾಲ ನೀಡಲಾಗುತ್ತದೆಯೋ, ಅದೇ ಮಿತಿಯೊಳಗೆ ಬ್ಯಾಂಕಿನ ಅಧ್ಯಕ್ಷರು, ಸಿಇಒ ಅಥವಾ ನಿರ್ದೇಶಕರು ವೈಯಕ್ತಿಕ ಸಾಲ ಪಡೆಯಬಹುದು. ನಿರ್ದೇಶಕರಿಗೆ ಸೆಕ್ಷನ್ 20ರ ಅಡಿಯಲ್ಲಿ ನೀಡಲಾದ ವಿನಾಯಿತಿಯು ಅವರಿಗೆ "ಸಾಲ ಪಡೆಯುವ ಹಕ್ಕನ್ನು" ನೀಡುತ್ತದೆಯೇ ಹೊರತು, ಬ್ಯಾಂಕಿನ "ಸಾಲ ನೀಡುವ ಮಿತಿಯನ್ನು (Credit Limits)" ಮೀರುವ ಅಧಿಕಾರವನ್ನು ನೀಡುವುದಿಲ್ಲ. ಸಾಲ ಪ್ರುಡೆನ್ಶಿಯಲ್ ಸೀಲಿಂಗ್ ಅಡಿಯಲ್ಲಿ ನಿಗದಿಪಡಿಸಿದ ಮಿತಿಗಳಿಗೆ ಒಳಪಟ್ಟಿರುತ್ತವೆ. ಆದ್ದರಿಂದ, ಸಾಮಾನ್ಯ ಸದಸ್ಯರಿಗೆ 5 ಲಕ್ಷ ರೂ. ಮಿತಿ ಇರುವಾಗ, ನಿರ್ದೇಶಕರಿಗೆ 10 ಲಕ್ಷ ರೂ. ಅಸುರಕ್ಷಿತ ಸಾಲ ನೀಡುವುದು ಖಂಡಿತವಾಗಿಯೂ ಆರ್‌ಬಿಐ ನಿಯಮಗಳ ಉಲ್ಲಂಘನೆಯಾಗುತ್ತದೆ.

**02. ಪಟ್ಟಣ ಸಹಕಾರ ಬ್ಯಾಂಕಿನ ನಿರ್ದೇಶಕರ ಪತ್ನಿ ಗೃಹ ನಿರ್ಮಾಣಕ್ಕಾಗಿ "ನೌಕರರಿಗೆ ಅನುಮತಿಸಲಾದ ಮಿತಿಯವರೆಗೆ ತಮ್ಮ ಬ್ಯಾಂಕಿನಿಂದ ಸಾಲ ಪಡೆಯಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ:** ಆರ್‌ಬಿಐ ಸುತ್ತೋಲೆಯ ಪ್ರಕಾರ, "ನೌಕರರಿಗೆ ಅನುಮತಿಸಲಾದ ಮಿತಿಯವರೆಗೆ" ಸಾಲ ನೀಡಬಹುದಾದ ವಿನಾಯಿತಿಯು ಕೇವಲ ಬ್ಯಾಂಕಿನ ನಿರ್ದೇಶಕರಿಗೆ (Director, Chairman, MD/CEO, member of BoM) ಮಾತ್ರ ಸೀಮಿತವಾಗಿದೆ. ನಿರ್ದೇಶಕರ ಸಂಬಂಧಿಕರಿಗೆ (ಪತ್ನಿ ಸೇರಿದಂತೆ) ಈ ವಿನಾಯಿತಿ ಅನ್ವಯಿಸುವುದಿಲ್ಲ. ನಿರ್ದೇಶಕರ ಪತ್ನಿಗೆ ಅಥವಾ ಸಂಬಂಧಿಕರಿಗೆ ಸಾಲ ನೀಡಲು ಕೇವಲ ಈ ಕೆಳಗಿನ ಸಂದರ್ಭಗಳಲ್ಲಿ ಮಾತ್ರ ಅವಕಾಶವಿರುತ್ತದೆ:

- ಸಾಲವು ಸಂಪೂರ್ಣವಾಗಿ ಸುರಕ್ಷಿತವಾಗಿದ್ದರೆ (Fully Secured). ಉದಾಹರಣೆಗೆ: ಬ್ಯಾಂಕಿನಲ್ಲಿರುವ ಸ್ಥಿರ ಠೇವಣಿ (Fixed Deposit), ಎಲ್‌ಐಸಿ ಪಾಲಿಸಿಗಳು (LIC Policies), ಅಥವಾ ಸರ್ಕಾರಿ ಭದ್ರತಾಪತ್ರಗಳ (Government Securities) ಮೇಲೆ ಸಾಲಪಡೆದರೆ ಮಾತ್ರ ಅದು ಸಾಧ್ಯ.
- ಆದರೆ, ಈ ಸಾಲಗಳು ಸಹ ಸಾಮಾನ್ಯ ಸದಸ್ಯರಿಗೆ ಅನ್ವಯವಾಗುವ ನಿಯಮಗಳು ಮತ್ತು ಬಡ್ಡಿದರದ ಅಡಿಯಲ್ಲೇ ಇರಬೇಕು. ಇವುಗಳಿಗೆ ನೌಕರರ ಮಿತಿ ಅಥವಾ ನೌಕರರ ಬಡ್ಡಿ ದರದ ರಿಯಾಯಿತಿ ಸಿಗುವುದಿಲ್ಲ.

**03. ನಮ್ಮ ಬ್ಯಾಂಕಿನಲ್ಲಿ ಅನೇಕ ಶೂನ್ಯ ಬ್ಯಾಲೆನ್ಸ್ (Zero Balance) ಖಾತೆಗಳಿದ್ದು, ಅವುಗಳಲ್ಲಿ ತುಂಬ ಸಮಯದಿಂದ ವ್ಯವಹಾರವಿಲ್ಲ. ಅಂತಹ ಖಾತೆಗಳನ್ನು ಬ್ಯಾಂಕು ಏಕಪಕ್ಷೀಯವಾಗಿ ಮುಚ್ಚಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ:** ಬ್ಯಾಂಕುಗಳು ಗ್ರಾಹಕರ ಶೂನ್ಯ ಬ್ಯಾಲೆನ್ಸ್ (Zero Balance) ಖಾತೆಗಳನ್ನು ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಏಕಪಕ್ಷೀಯವಾಗಿ (Unilaterally) ಮುಚ್ಚುವ ಅಧಿಕಾರವನ್ನು ಹೊಂದಿರುತ್ತವೆ. ಆದರೆ, ಇದಕ್ಕೆ ಭಾರತೀಯ ರಿಸರ್ವ ಬ್ಯಾಂಕ್ (RBI) ಕೆಲವು ನಿಯಮಗಳನ್ನು ರೂಪಿಸಿದೆ. ಬ್ಯಾಂಕ್‌ಗಳು ಖಾತೆಯನ್ನು ಮುಚ್ಚಲು ಪ್ರಮುಖ ಕಾರಣಗಳು ಇಲ್ಲಿವೆ:

1. **ದೀರ್ಘಕಾಲದ ನಿಷ್ಕ್ರಿಯತೆ (Inoperative Accounts)**

   ಯಾವುದೇ ಖಾತೆಯಲ್ಲಿ ಸತತವಾಗಿ 2 ವರ್ಷಗಳ ಕಾಲ ಯಾವುದೇ ಹಣಕಾಸಿನ ವಹಿವಾಟು (ಡೆಬಿಟ್ ಅಥವಾ ಕ್ರೆಡಿಟ್) ನಡೆಯದಿದ್ದರೆ, ಅದನ್ನು 'ನಿಷ್ಕ್ರಿಯ ಖಾತೆ' ಎಂದು ಪರಿಗಣಿಸಲಾಗುತ್ತದೆ. ಇಂತಹ ಸಂದರ್ಭದಲ್ಲಿ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಬಹುದು.

2. **KYC ದಾಖಲೆಗಳ ಕೊರತೆ**

   ಗ್ರಾಹಕರು ತಮ್ಮ ಕೆವೈಸಿ (KYC - Know Your Customer) ದಾಖಲೆಗಳನ್ನು (ಆಧಾರ್, ಪ್ಯಾನ್ ಕಾರ್ಡ್ ಇತ್ಯಾದಿ) ನಿಗದಿತ ಸಮಯದಲ್ಲಿ ಅಪ್‌ಡೇಟ್ ಮಾಡದಿದ್ದರೆ, ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಬಹುದು

3. **ಅನುಮಾನಾಸ್ಪದ ಚಟುವಟಿಕೆಗಳು**

   ಖಾತೆಯಲ್ಲಿ ಅಕ್ರಮ ಹಣ ವರ್ಗಾವಣೆ ಅಥವಾ ಮೋಸದ ವಹಿವಾಟುಗಳು ನಡೆಯುತ್ತಿವೆ ಎಂದು ಬ್ಯಾಂಕ್‌ಗೆ ಸಂಶಯ ಬಂದರೆ, ಯಾವುದೇ ಮುನ್ಸೂಚನೆ ಇಲ್ಲದೆ ಖಾತೆಯನ್ನು ಸ್ಥಗಿತಗೊಳಿಸಬಹುದು.

**ಬ್ಯಾಂಕ್ ಪಾಲಿಸಬೇಕಾದ ನಿಯಮಗಳು:**

- **ಮುನ್ಸೂಚನೆ (Notice)** : ಸಾಮಾನ್ಯವಾಗಿ ಖಾತೆಯನ್ನು ಮುಚ್ಚುವ ಮೊದಲು ಬ್ಯಾಂಕ್ ಗ್ರಾಹಕರಿಗೆ ನೋಟಿಸ್ ಅಥವಾ ಎಸ್‌ಎಮ್‌ಎಸ್ ಮೂಲಕ ಮಾಹಿತಿ ನೀಡಬೇಕು.
- **ಕಾರಣ ತಿಳಿಸುವುದು** : ಬ್ಯಾಂಕ್ ಖಾತೆಯನ್ನು ಮುಚ್ಚಲು ಸರಿಯಾದ ಕಾರಣವನ್ನು ನೀಡಬೇಕಾಗುತ್ತದೆ.

## ಪಟ್ಟಣ ಸಹಕಾರ ಬ್ಯಾಂಕುಗಳ ಗಮನಕ್ಕೆ

ಮಹಾಮಂಡಳವು **"ವಾರಪತ್ರಿಕೆ"** ಹಾಗೂ **"ತ್ರೈಮಾಸಿಕ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆ"** ಎಂಬ ಎರಡು ಪತ್ರಿಕೆಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಹಕಾರ ಕ್ಷೇತ್ರ, ಬ್ಯಾಂಕಿಂಗ್ ಕ್ಷೇತ್ರ ಹಾಗೂ ಇತರೆ ಉಪಯುಕ್ತ ಸುದ್ದಿ / ವಿಚಾರಗಳನ್ನು ಹಾಗೂ ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬದಲಾವಣೆಗೊಳಪಡುವ ಸಹಕಾರಿ ಕಾನೂನು ವಿದ್ಯಮಾನಗಳ ಕುರಿತು ಪ್ರಶ್ನೋತ್ತರ, ವಿವಿಧ ಬ್ಯಾಂಕುಗಳ ಯಶೋಗಾಥೆ, ಪ್ರಗತಿ ಚಿತ್ರ, ಬ್ಯಾಂಕುಗಳಲ್ಲಿ ಜರುಗಿರುವ ವಿವಿಧ ಸಮಾರಂಭಗಳ ವಿವರಗಳನ್ನು ಪ್ರಕಟಿಸಲಾಗುತ್ತಿದೆ. ಪ್ರಯುಕ್ತ, ಬ್ಯಾಂಕಿಗೆ ಸಂಬಂಧಿಸಿದ ವರದಿಗಳನ್ನು ಕೂಡಲೇ ಮಹಾಮಂಡಳಕ್ಕೆ ಅಂಚೆ ಮೂಲಕ ಅಥವಾ ಇ–ಮೇಲ್ ವಿಳಾಸಕ್ಕೆ email: editorkubf1@gmail.com ಅಥವಾ kscubfed@gmail.comಗೆ ಕಳುಹಿಸಿಕೊಟ್ಟಲ್ಲಿ ಮಹಾಮಂಡಳದ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.



# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಅಜೀಂ ಪ್ರೇಮ್‌ಜಿ ಫೌಂಡೇಶನ್ ಬೆಂಬಲದೊಂದಿಗೆ 1,000 ಹಾಸಿಗೆಗಳ ಆಸ್ಪತ್ರೆಯನ್ನು ನಿರ್ಮಿಸಲು ಬೆಂಗಳೂರು ಉತ್ತರದ ಕ್ಯಾಲಸನಹಳ್ಳಿಯಲ್ಲಿ ರಾಜ್ಯ ಸರ್ಕಾರವು 10 ಎಕರೆ ಭೂಮಿ ಮಂಜೂರು ಮಾಡಿದೆ. ಗ್ರಾಮೀಣ ಪ್ರದೇಶಗಳಿಂದ ಬರುವ ರೋಗಿಗಳ ಅಗತ್ಯಗಳನ್ನು ಪೂರೈಸಲು ಇದು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಾಗಲಿದೆ. ಒಟ್ಟು 1,000 ಕೋಟಿ ರೂ. ವೆಚ್ಚದ ಈ ಆಸ್ಪತ್ರೆಯ ನಿರ್ಮಾಣ ಕೆಲಸ ಶೀಘ್ರದಲ್ಲೇ ಪ್ರಾರಂಭವಾಗಲಿದೆ. ಅಜೀಂ ಪ್ರೇಮ್‌ಜಿ ಪ್ರತಿಷ್ಠಾನವು ಪ್ರತಿವರ್ಷ ಆಸ್ಪತ್ರೆ ನಿರ್ವಹಣೆಗಾಗಿ ರೂ.350 ಕೋಟಿ ಖರ್ಚು ಮಾಡುತ್ತದೆ.
- ಕಳೆದ ಒಂದು ದಶಕದಿಂದ ವಿಜ್ಞಾನ ಲೋಕದಲ್ಲಿ ಹಲವು ಅಚ್ಚರಿಯ ಸಾಧನೆಗಳಿಗೆ ಕಾರಣಳಾಗಿರುವ ಅಮೆರಿಕ ಮೂಲದ ಹೆಸರು ಸಬ್ರಿನಾ ಪಾಸ್ಟರ್ಸ್ಕಿ. 13 ವರ್ಷಕ್ಕೆ ತನ್ನದೇ ವಿಮಾನವೊಂದನ್ನು ನಿರ್ಮಿಸುವ ಮೂಲಕ ಜಗತ್ತಿನ ಗಮನ ಸೆಳೆದಿದ್ದ ಸಬ್ರಿನಾ, ತನ್ನ 23ನೇ ವಯಸ್ಸಿಗೆ ವಿಮಾನ ಚಾಲನೆಯ ಪರವಾನಗಿ ಪಡೆದು, ತಾನೇ ನಿರ್ಮಿಸಿದ ವಿಮಾನದಲ್ಲಿ ಆಗಸದಲ್ಲಿ ಹಾರಾಡಿದರು.
- ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಚಿಕ್ಕತಿಮ್ಮನಹಳ್ಳಿ ಗ್ರಾಮದ ಬಡ ಕುಟುಂಬವೊಂದರ ದೀಪಿಕಾ ಟಿ.ಸಿ. ಅವರು ತಮ್ಮ ದೃಷ್ಟಿಹೀನತೆಯನ್ನು ಸಾಧನೆಯ ಹಾದಿಯನ್ನಾಗಿ ಮಾಡಿಕೊಂಡವರು. ಅಂಧರ ಕ್ರಿಕೆಟ್‌ನಲ್ಲಿ ತಮ್ಮ ವೃತ್ತಿಜೀವನವನ್ನು ಕಂಡುಕೊಂಡ ಕೆಲವೇ ವರ್ಷಗಳಲ್ಲಿ ವೃತ್ತಿ ಪರ ಕ್ರಿಕೆಟ್ ಪಂದ್ಯಗಳನ್ನಾಡುವ ಮೂಲಕ ಬ್ಯಾಟ್ಸ್‌ಮನ್ನಾಗಿ ಈಗ ತಂಡದ ನಾಯಕಿಯಾಗಿದ್ದಾರೆ.
- ಅಮೆರಿಕದಲ್ಲಿ ನೆಲಸಿರುವ ಭಾರತ ಮೂಲದ ಖಗೋಳ ವಿಜ್ಞಾನಿ ಪ್ರೊ. ಶ್ರೀನಿವಾಸ ಕುಲಕರ್ಣಿ ಅವರಿಗೆ ಇಂಗ್ಲೆಂಡ್‌ನ ರಾಯಲ್ ಅಸ್ಟ್ರಾನಾಮಿಕಲ್ ಸೊಸೈಟಿಯ ಚಿನ್ನದ ಪದಕ ಲಭಿಸಿದೆ. ಖಗೋಳ ವಸ್ತುಗಳು ಮತ್ತು ಗಾಮಾ ಕಿರಣಗಳ ಸ್ವಯಂಸ್ಫೋಟ ಸೇರಿದಂತೆ ಖಗೋಳ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ವಿಷಯಗಳ ಬಗ್ಗೆ ಸಂಶೋಧನೆ ಕೈಗೊಂಡಿರುವ ಅವರು, ಖ್ಯಾತ ವಿಜ್ಞಾನಿಗಳಾದ ಆಲ್ಬರ್ಟ್ ಐನ್‌ಸ್ಟೀನ್, ಸ್ಟೀಫನ್ ಹಾಕಿಂಗ್, ಜಾಸ್‌ಲಿನ್ ಬೆಲ್ ಬರ್ನೆಲ್, ಮತ್ತು ಎಡ್ವಿನ್ ಹಬಲ್ ಅವರ ಸಾಲಿಗೆ ಕುಲಕರ್ಣಿ ಅವರೂ ಸೇರಿದ್ದಾರೆ.
- ಶಾಲಾ ವಾರ್ಷಿಕೋತ್ಸವಗಳಲ್ಲಿ ಚಲನಚಿತ್ರ ಗೀತೆಗಳ ನೃತ್ಯ ಪ್ರದರ್ಶನಗಳು ಹೆಚ್ಚುತ್ತಿರುವುದನ್ನು ಗಮನಿಸಿದ ಉಡುಪಿ ಮೂಲದ 60 ವರ್ಷ ಹಳೆಯ ಸಂಸ್ಥೆಯಾದ ರಂಗಭೂಮಿ ತಂಡ, ಯುವ ಪೀಳಿಗೆಯಲ್ಲಿ ರಂಗಭೂಮಿಯಲ್ಲಿ ಆಸಕ್ತಿಯನ್ನು ಪುನರುಜ್ಜೀವನಗೊಳಿಸಲು 'ರಂಗಶಿಕ್ಷಣ'ದ ನಾಟಕ ಕಲಿಸುತ್ತಿದೆ.

## ಓದುಗರ ಅನಿಸಿಕೆ...


ಪಟ್ಟಣ ಸಹಕಾರ ಬ್ಯಾಂಕುಗಳ
ವಾರ್ತಾ ಪತ್ರಿಕೆ

**ಕೂಡಲೇ ನೀಡಲಿ :** ದೇಶದ ಆರ್ಥಿಕ ಪ್ರಗತಿಗೆ ನಮ್ಮ ರಾಜ್ಯ ದೊಡ್ಡ ಕೊಡುಗೆ ನೀಡುತ್ತಿದೆ. ಆದರೆ, ಜಿಎಸ್‌ಟಿ ಸರಳೀಕರಣದ ನಂತರ ಪ್ರಸ್ತುತ ವರ್ಷ ಸುಮಾರು ರೂ.5,000 ಕೋಟಿ ಕೊರತೆಯಾಗಿದೆ. ಇದರಿಂದ ಕೇಂದ್ರ ಸರ್ಕಾರ ರಾಜ್ಯಕ್ಕೆ ನ್ಯಾಯಯುತವಾಗಿ ಕೊಡಬೇಕಾದ ಅನುದಾನವನ್ನು ತಡ ಮಾಡದೆ ನೀಡಲಿ. ಮುಂದಿನ ಬಜೆಟ್‌ನಲ್ಲಿ ರಾಜ್ಯಕ್ಕೆ ಬರಬೇಕಾದ ಈ ಹಿಂದಿನ ಬಜೆಟ್‌ನಲ್ಲಿ ಘೋಷಿಸಿದ್ದ ಅನುದಾನಗಳನ್ನು ಕೂಡಲೇ ನೀಡಲಿ.

**ಜಿ. ವೆಂಕಟರಮಣ ಭಟ್, ಮೈಸೂರು**

**ನ್ಯಾಯಯುತ ಬಡ್ಡಿ ದರ :** ಬ್ಯಾಂಕುಗಳಲ್ಲಿ ಠೇವಣಿ ಇಡುವವರ ಸಂಖ್ಯೆ ಇಳಿಯುತ್ತಿರುವ ಕಾರಣ ಸಾಲ–ಠೇವಣಿ ಅನುಪಾತ ಕುಸಿಯಲು ಕಾರಣವಾಗಿದೆ. ಬ್ಯಾಂಕುಗಳು ನೀಡುವ ಬಡ್ಡಿದರ ತುಂಬಾ ಕಡಿಮೆಯಾದ್ದರಿಂದ ಗ್ರಾಹಕರು ಹೆಚ್ಚು ಲಾಭ ತರುವ ಇತರೆಡೆ ಹೂಡಿಕೆ ಮಾಡುತ್ತಿದ್ದಾರೆ. ಇನ್ನೂ ಮುಂದಾದರೂ ಬ್ಯಾಂಕುಗಳು ಗ್ರಾಹಕರ ಠೇವಣಿಗೆ ನ್ಯಾಯಯುತ ಬಡ್ಡಿ ದರ ನೀಡಲಿ.

**ಅರವಿಂದಸ್ವಾಮಿ ಪಿ.ಕೆ., ಬಳ್ಳಾರಿ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.